**ಓ ಎಸ್ ನಂಃ16/2017**

**ಪಿ. ಡಬ್ಲ್ಯೂ ಃ 1**

**ದಿಃ 12.08.2024 ರಂದು ಮದ್ಯಂತರ ಅರ್ಜಿ ಆದೇಶದ ಮೇರೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ 6 ರಿಂದ 13 ರವರ ಪರ ಶ್ರೀ ಕೆ ಎಸ್ ಪಿ ವಕೀಲರಿಂದ ಃ**

ನಿ ಪಿ 110 ರಲ್ಲಿ ವೆಂಕಟಮ್ಮ ನವರು 3 ಎಕರೆ 12 ಗುಂಟೆ ಜಮೀನನ್ನು ಖರೀದಿ ಮಾಡಿರುವುದಾಗಿ ನಮೂದು ಇರುತ್ತದೆ ಎಂದರೆ ಸಾಕ್ಷಿಯು ಸದರಿ 3 ಎಕರೆ 12 ಗುಂಟೆ ಜಮೀನಿನೊಂದಿಗೆ ನಮಗೆ ಅವರು ಒಟ್ಟು 5 ಎಕರೆ 12 ಗುಂಟೆ ಜಮೀನಿನ ಸ್ವಾಧೀನ ಬಿಟ್ಟು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿ ಪಿ 110 ರಲ್ಲಿ ಎಲ್ಲೂ ಕೂಡ 5 ಎಕರೆ 12 ಗುಂಟೆ ಜಮೀನು ಸ್ವಾಧೀನ ಬಿಟ್ಟುಕೊಟ್ಟಿರುವ ಬಗ್ಗೆ ನಮೂದು ಆಗಿರುವುದಿಲ್ಲ ಎಂದರೆ ಸಾಕ್ಷಿಯು ಚೆಕ್ ಬಂದಿಯಲ್ಲಿ ಸದರಿ ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ನಿ ಪಿ 110 ರಲ್ಲಿ ಚೆಕ್ ಬಂದಿಯನ್ನು ತೋರಿಸಲಾಗಿರುವುದಿಲ್ಲ ಎಂದರೆ ಸರಿ.

ನಿಪಿ 111 ಮತ್ತು ನಿ ಪಿ 112 ರಲ್ಲಿ ವೆಂಕಟಮ್ಮ ನವರ ಹೆಸರಿನಲ್ಲಿ 5 ಎಕರೆ 12 ಗುಂಟೆ ಜಮೀನು ಇದ್ದ ಹಾಗೆ ತೋರಿಸಲಾಗಿರುವುದಿಲ್ಲ ಎಂದರೆ ಸುಳ್ಳು. ನಿ ಪಿ 113 ರಲ್ಲಿ 5 ಎಕರೆ 12 ಗುಂಟೆ ಜಮೀನು ಗುಂಡೂರಾವ್ ರವರ ಹೆಸರಿನಲ್ಲಿ ತೋರಿಸಲಾಗಿರುತ್ತದೆ ಎಂದರೆ ಸರಿ. ನಿ ಪಿ 114 ರ ಆಕಾರ್ ಬಂದ್ ನಲ್ಲಿ 5 ಎಕರೆ 12 ಗುಂಟೆ ಜಮೀನು ನನ್ನ ಅಜ್ಜಿಯ ಹೆಸರಿನಲ್ಲಿ ತೋರಿಸಲಾಗಿರುವುದಿಲ್ಲ ಎಂದರೆ **ಸುಳ್ಳು. ನಿ ಪಿ 111 ರಲ್ಲಿ ಕೂಡ** ವೆಂಕಟಮ್ಮ ನವರ ಹೆಸರಿನಲ್ಲಿ ಯಾವುದೆ ಖಾತೆ ಬಂದಿರುವುದಿಲ್ಲ ಎಂದರೆ ಸರಿ. ನಿ ಪಿ 114 ರಲ್ಲಿ ಕೂಡ ವೆಂಕಟಮ್ಮ ನವರ ಹೆಸರಿನಲ್ಲಿ 5 ಎಕರೆ 12 ಗುಂಟೆ ಜಮೀನು ಇದ್ದ ಹಾಗೆ ತೋರಿಸಲಾಗಿರುವುದಿಲ್ಲ ಎಂದರೆ ಸುಳ್ಳು. ನಿ ಪಿ 117 ನನ್ನ ಅಜ್ಜಿಯ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸರಿ. ನಿ ಪಿ 118 ರಿಂದ ನಿ ಪಿ 122 ರ ದಾಖಲಾತಿಗಳು ಈ ದಾವೆಗೆ ಸಂಬಂಧ ಇರುವುದಿಲ್ಲ ಎಂದರೆ ಸುಳ್ಳು. ಈ ದಾಖಲಾತಿಗಳು ಮತ್ತು ಈ ದಾವೆಗೂ ಸಂಬಂಧ ಇಲ್ಲದೆ ಇದ್ದರೂ ಸುಳ್ಳು ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸುಳ್ಳು.

ಮದ್ಯಂತರ ಅರ್ಜಿ ಮೇಲೆ ನಾನು ಸಲ್ಲಿಸಿದ್ದ ಎಂ ಎ ನ್ನು 3ನೆ ಅಪರ ಜಿಲ್ಲಾ ನ್ಯಾಯಾಧೀಶರ ಮುಂದೆ ವಜಾವಾಗಿರುತ್ತದೆ ಎಂದರೆ ಸರಿ. ಸದರಿ ವಿಚಾರವನ್ನು ನಾನು ನ್ಯಾಯಾಲಯದ ಮುಂದೆ ಹೇಳಿರುವುದಿಲ್ಲ ಎಂದರೆ ಸರಿ. ಅದರ ಮೇಲೆ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ನಾನು ಮೇಲ್ಮನವಿ ಸಲ್ಲಿಸಿರುವುದಿಲ್ಲ. ನನಗೆ ದಾವಾ ಸ್ವತ್ತಿನಲ್ಲಿ ಯಾವುದೆ ಹಕ್ಕು ಬಾಧ್ಯತೆ ಗಳಿರುವುದಿಲ್ಲ ಎಂದರೆ ಸುಳ್ಳು.

**ಎ ಜಿ ಪಿ ರವರು ಗೈರು ಹಾಜರಾಗಿರುವುದರಿಂದ ಅವರ ಪರವಾಗಿ ಪ್ರತಿವಾದಿ ಪಾಟೀ ಸವಾಲು ಏನು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**